

ಆಡಳಿತ ಸೌಧ

ವೀರನ ದುರ್ಗ ಕೋಟಿ ಐತಿ. ಇದ್ರಗ ದವ್ಸ, ಧಾನ್ಯ, ವಸ್ತುಗಳ್ನ ಸಂಗ್ರಹ ಮಾಡ್ತಿದ್ರು. ಶಿವನ್ ತೊಡಿ ಮ್ಯಾಲ ಕುಂತಿರೋ ಪಾರ್ವತಿಯ ಏಕೈಕ ಗುಡಿ, ವಸಂತ ಮಲ್ಲಿಕಾರ್ಜುನ ದೇವಸ್ಥಾನ, ಸಿಗೋದು ನಮ್ ತಾಲ್ಲೂಕ್‌ನ್ಯಾಗ.

ವಿಜಯನಗರ ಸಾಮ್ರಾಜ್ಯ ಅರಸ ಸದಾಶಿವ ರಾಯ 1552 ರಾಗ ಕಂಬದ್ ಮ್ಯಾಲೆ ಶಾಸನ ಬಸ್ರ್ಯಾನ. ಇನ್ನ್ ಬೆಳಿ ಸುದ್ದಿಗ್ ಬಂದ್ರ ನಮ್ ಊರನ್ಯಾಗ ಮಾವ್ನ್ ಹಣ್ಣ್, ಹುಂಚ್ಯಾಂಣ್ಣು ಹೆಚ್ಚು. ಹುಂಚ್ಯಾಂಣೆನಿಂದ ಹುಂಚಿ ಕಾಯಿ ಮಾಡ್ತಾರ. ಚಟ್ನಿ ತಿಂದ್ರಾ ಬಾಯಾಗ ನೀರ್ ಬರ್ತಾವು. ಆಡಳಿತ ಸೌಧ, ಕೋರ್ಟ್ ಕೂಡ ಐತ್ರಿ. ವೃದ್ಧರ ಸೇವೆ ಮಾಡಕ ಅನಾಥ ಆಶ್ರಮ ಅದವು.

ಈಜಿಪ್ಟ್ ಅಂದ್ರ ಪಿರಮಿಡ್ ನೆನ್ಪಿಗ್ ಬರ್ತಾತಿ ಹೌದಿಲ್ಲೊ? ಅಂತ ಪಿರಮಿಡ್ ದೊಡ್ಡ ಆಲದ್ ಮರದ್ ಹತ್ರ ಐತಿ. ಅಲ್ಲಿ ಬುದ್ಧನ ಧ್ಯಾನ ಮಗ್ನ ಮೂರ್ತಿನು ಐತಿ.

ರಂಗಭೂಮಿ ಕಲಾವಿದರು ಶಿವಕುಮಾರಿ, ಪದ್ಮ ಇವ್ರು ಕೊಡುಗೆ ಕೊಟ್ಟಿದ್ದು ಇಲ್ಲೇ. ಇತ್ತೀಚೆಗಿನ ಉದಯೋನ್ಮುಖ ನಟ ಸಂತೋಷ್ ಕುಮಾರ್ ಇವರ ಹುಟ್ಟೂರು ಇದೇ ಕೂಡ್ಲಿಗಿ ತಾಲ್ಲೂಕು.

ಒನಕೆ ಓಬವ್ವ ಹುಟ್ಟಿದ್ ಊರು ಗುಡೇಕೋಟಿ ಇರದು ನಮ್ ತಾಲ್ಲೂಕ್‌ನ್ಯಾಗ. ಗುಡೇಕೋಟಿನಾಗ ಕರಡಿಗಳ ಸಂಖ್ಯಿ ಹೆಚ್ಚು. ಈ ಜಾಗಕ್ಕ ಕನ್ನಡದ ಹೆಸರಾಂತ ಚಿತ್ರನಟ ಪುನೀತ್ ರಾಜಕುಮಾರ್ ಭೇಟಿ ನೀಡಿದ್ರು. ಚೂರುನೂರು ರಸ್ತ್ಯಾಗ ಗುಲ್‌ಮೋಹರ್ ಹೂವ ಬಾನಿಗೆ ರಂಗೋಲಿ ಹಾಕ್ದಂಗ್ ಬಿಡ್ತಾವು. ಐತಿಹ್ಯ ಹೊಂದಿರೋ ದೇವಸ್ಥಾನ ತುಂಬ್ಯಾವು. ಹಸಿರು ಸೆರಗ್ ನ್ಯಾಗ ಕೂಡ್ಲಿಗಿ ಕೇರಿ ಕಂಗೊಳ್‌ಸ್ತಾವು. ಕೆರಿ ಕೋಡಿ ಬಿದ್ರ ನೋಡಾಕ ಒಂದ್ ಹಬ್ಬ. ಜನ್ರು ತಮ್ಮ ಕುಟುಂಬ ನೆಂಟ್ರು ಎಲ್ರನ್ನ ಕರ್ಕೊಂಡ್ ಬಂದು ನೋಡ್ತರ. ಹಿಂಗಾ ಆಧ್ಯಾತ್ಮಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕೇಂದ್ರ ಆಗ್ಯೆತಿ ನಮ್ ಕೂಡ್ಲಿಗಿ. ಸಾಲಿ ವಿಶ್ಯಾದಾಗ ಗಂಡ್ ಮಕ್ಳಿಗಿಂತ ಹೆಣ್ಣ್ ಮಕ್ಳೇ ಸ್ಟ್ರಾಂಗು ಗುರು.

ಪದವೀಧರ ಯುವಕ್ರ ಕನ್ನಡ ಪ್ರೀತಿ ಹೆಂಗೈತಿ ಅಂದ್ರ ಅವ್ರ್ ತ್ವಾಟ್‌ದಾಗ ಕನ್ನಡ್ದ ಧ್ವಜ ಕಂಗೊಳಿಸ್ತಾವು. ಗಾದಿ ಮಾತಿನ್ ಫಲಕ ಕಾಂಣ್ತಾವು. ನಮ್ ರೈತ್ರು ಕೃಷಿ ಮಾಡಕ ಮಾತ್ರ ಸೀಮಿತ ಅಲ್ಲ. ರಸ್ತಿ ನಿರ್ಮಾಣ ಮಾಡಕು ಸೈ.

ನಿರುಪಯುಕ್ತ ವಸ್ತುಗಳಿಂದ ವಿಜ್ಞಾನ ಮಾದ್ರಿ ತಯಾರಿಸ್ತಾರ. ಕಸದ ತುಂಡಿಂದ ಯಂತ್ರ, ಕಡ್ಮಿ ವೆಚ್ಚದ್ ಸಲಕರಣಿ, ಟೆಲಿಸ್ಕೋಪ್ ಶಬ್ದದ ಪರಿಚಲನೆ, ಬೆಳಕಿನ್ ಪರಿಚಲನೆ, ಇಂಧನ ರಹಿತ ವಸ್ತು, ಇಂಧನ ಮುಕ್ತ ಮೋಟಾರ್, ಸೈಕಲ್ ತಯಾರಿಸ್ತಾರಾ ಹಳ್ಳಿಗಾಡಿನ ವಿಜ್ಞಾನಿ ವಿವೇಕಾನಂದ ಸ್ವಾಮಿ. ಸಾಲು ಮರದ ತಿಮ್ಮಕ್ಕನಂಗ ನಮ್ ಭಾಗದ್ ಯುವಕ್ರು ಪರಿಸರ ಸಂರಕ್ಷಣೆಗೆ ತಮ್ಮ ಜೀವ, ಜೀವ್ನ ಒತ್ತೆ ಇಟ್ಟು ಬದಕ್ತಾರ ಅವ್ರ ಗೂಳೆಪ್ಪ. ಆಂಧ್ರಕ್ಕ ನೀರು ಹರಿಯೋದ್ನ ತಪ್ಸ್ಯಾರ ಜೈಕುಮಾರ್ ಸರ್.

ಕನ್ನಡ್ ಪುಸ್ತಕಗಳ್ನ ಸಾಲಿ ಸಾಲಿಗೂ ಹೋಗಿ ಕಡ್ಮಿ ಬೆಲಿಗೆ ಮಾರ್ತಾರ ಬಸವನಗೌಡ ಶಿಕ್ಷಕರು. ಕನ್ನಡ ಓದ್ರಿ ಅಂತ ಪ್ರೇರಣಿ ಮಾಡದು ಇವ್ರ ಕಾಯ್ಕ. ಅಲ್ಪನಿಗೆ ಐಶ್ವರ್ಯ ಬಂದ್ರ ಅರ್ಧ ರಾತ್ರೀಲಿ ಕೊಡೆ ಹಿಡ್ದ ಅನ್ನೊ ಮಾತಿಗೆ ವಿರುದ್ಧ ಅಂಜಿನಮ್ಮ ಅವರ್ ಜೀವ್ನ. ಅಧ್ಯಕ್ಷೆ ಆದ್ರು ಪಂಚರ್ ಹಾಕೋ ಕೆಲ್ಸ ಬಿಡ್ಲಿಲ್ಲ, ಇವಾಗ್ ಅವ್ರು ಮಾಜಿ ಆಗ್ಯಾರ.

ಉತ್ತರ ಕರ್ನಾಟಕದಾಗ ಸಕ್ರಿ ಆರ್ತಿ ಹೆಚ್ಚು ಜನಪ್ರಿಯ. ಮಕ್ಳು ಪ್ರಿಯ. ಬಾಯಾಗ ಇಟ್ರೆ ಕರ್ಗಂಗ್ ಇರ್ತವು. ಬಾಯಾಗ ನೀರ್ ಬಂತಾ? ದೇವದಾಸಿ ಪದ್ಧತಿಯಿಂದ ಹೊರಗ್ ಬಂದರು ಅದರಾ. ಅಕ್ಷರಸ್ಥ, ಅನಕ್ಷರಸ್ಥ ಹೆಣ್ಮಕ್ಳು ಸೇರಿ ಸಮಾಜಮುಖಿ ಕಾರ್ಯದಾಗ ಬ್ಯುಸಿ ಇರ್ತಾರ. ಯೋಗ, ಡ್ಯಾನ್ಸ್‌ನಾಗ ಗಿನ್ನಿಸ್ ರೆಕಾರ್ಡ್ ಮಾಡ್ಯಾರ. ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟ್‌ದಾಗ ನಮ್ ಊರ್ನ ಪ್ರತಿನಿಧಿಸ್ಯಾರ. ಇನ್ನು ಕ್ರೀಡೆ ವಿಷ್ಯಕ್ಕ ಬಂದ್ರ ಕಬ್ಬಡ್ಡಿ, ಕುಸ್ತ್ಯಾಗ ಚಾಂಪಿಯನ್ಸ್ ಆಗ್ಯಾರ. ಸಾರಿಗೆ ಅಂದ್ರ ಸೈಕಲ್‌ನಿಂದ ಹಿಡ್ದು ಬಸ್ಸಿನ್‌ವರ್ಗು ಎಲ್ಲಾ ಓಡಸ್ತಾರ ನಮ್ ಹುಡ್ಗೀರು. ಇಂದಿರಾ ಗಾಂಧಿಯಂತಹ ಹಲವು ಗಣ್ಯರು ಭೇಟಿ ಕೊಟ್ಟಾರ.

ಜೋಕಪ್ಪ, ಬಂಜಾರ ಸಮುದಾಯದ ದೀಪಾವಳಿ ಹಬ್ಬ ಬಾಳ ಜೋರು. ಸಿದ್ಧಯ್ಯನ ಗುಡ್ಡ, ಎಡಿ ಗುಡ್ಡ ನೋಡ್ಬೇಕಾದ ಜಾಗ.

ಕಾಗಿ ಅಂದ್ರ ಅಪಶಕುನ ಅನ್ನೊ ನಾವ್, ತಿಪ್ಪೇಸ್ವಾಮಿ ಅವ್ರನ್ನ ನೋಡಿ ಕಲಿಬೇಕು. ಕಾಗಿಗಳಿಗೆ ಊಟ ಹಾಕಿ ತಾವ್ ಊಟ ಮಾಡ್ತಾರ. ಪರ್ವಾಗಿ ಅವರ್ ಮೈಮ್ಯಾಲೆ ಕುಂತು ಕೃತಜ್ಞತೆ ಹೇಳ್ತಾವು.

ವಿಜಯನಗರ ಸಾಮ್ರಾಜ್ಯದ ಪತನದ ನಂತ್ರ ಜರ್ಮಲಿಯ ಪಾಳೆಗಾರರು ಆಳ್ವಿಕೆ ಮಾಡಿದ್ ಕೀರ್ತಿ ಐತಿ. ಸರಿಹೊತ್ತು, ದಿನ್ದ ಇಪ್ಪತ್ನಾಲ್ಕು ಗಂಟಿ ನರ್ಸ್ ಕೆಲ್ಸ ಮಾಡೋ ಉಮಾದೇವಿಯವ್ರ ಪಲ್ಸ್ ಪೋಲಿಯೊ ಕೆಲಸಕ್ಕ ದೆಹಲಿಯಿಂದ ರಾಷ್ಟ್ರ ಮನ್ನಣೆ ಸಿಕ್ಕಾತಿ. ಕೂಡ್ಲಿಗಿ ತಾಲ್ಲೂಕಿನ ಡಿ ದರ್ಜೆ ನೌಕರರಾಗಿ ನಿವೃತ್ತಿ ತಗಂಡ ಶಿವಣ್ಣ ಇವ್ರು ಒಂದಿನನು ರಜೆ ಹಾಕ್ದ ಕೆಲ್ಸ ಮಾಡಿದ್ದಕ್ಕ ತಾಲ್ಲೂಕು, ಜಿಲ್ಲಾ ಮಟ್ಟದಾಗ ಜಿಲ್ಲಾಧಿಕಾರಿಯವ್ರಿಂದ ಸನ್ಮಾನ, ಪ್ರಶಸ್ತಿ ಪಡ್ದಾರ.

ನಮ್ ಊರಿನ್ ಬಗ್ಗೆ ಒಂದ್ ದೊಡ್ಡ್ ಬುಕ್ಕನಾ ಬರಿಬೋದು ಅಷ್ಟ್ ವಿಷ್ಯ ಅದವು. ಇಷ್ಟೆಲ್ಲಾ ಜಾಗಗಳನ್ ನೀವ್ ನೋಡ್ಬೇಕು ಅಂದ್ರ ಮರಿದೆ, ತಪ್ದೇ ಕೂಡ್ಲಿಗಿಗೆ ಬರ್ಬೇಕು ನೋಡ್ರಿ. ಮಿಸ್ ಮಾಡ್ದೆ ಬರ್ರಿ. ಕೂಡ್ಲಿಗಿ ನೋಡ್ಕ್ಯಾಂಡ್ ಹೋಗ ಮುಂದ ಮಂಡಾಳು, ಮಿರ್ಚಿ, ಟೀ ಟೇಸ್ಟ್ ಮಾಡಿ ಹೋಗುವಂತ್ರಿ. ಇನ್ಯಾಕ್ ತಡ ಮಾಡ್ತೀರಿ ಜಲ್ದಿ, ಜಲ್ದಿ ಬಸ್ಸ್ ಹತ್ರಿ ನಮ್ ಊರಿಗ್ ಬರ್ರೀ...



ಕಳೆದ ವಾರದ 'ಚೆನ್ನುಡಿ'
'ವೇಣುಗ್ರಾಮದ ವೇಣುನಿನಾದ' ಕೇಳಿ...
ಮಧುರಾ ಕರ್ಣಮ್ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.